ಕರಡು

# ವಿಶ್ವ ಬ್ಯಾಂಕ್

ಸಂಪರ್ಕಗಳಿಗಾಗಿ: ದೆಹಲಿಯಲ್ಲಿ: ಗೀತಾಂಜಲಿ ಛೋಪ್ರಾ (91 11) 2461-7241
**BÈßçÅé: gchopra@worldbank.org**
ವಾಷಿಂಗ್‌ಟನ್‌ನಲ್ಲಿ: ಕರೀನಾ ಮಾನಸೇ (202) 473-1729
ಇ–ಮೈಲ್: kmanasseh@worldbank.org

## ಭಾರತದ ಗ್ರಾಮೀಣ ರಸ್ತೆಗಳ ಕಾರ್ಯಕ್ರಮಕ್ಕೆ ವಿಶ್ವಬ್ಯಾಂಕಿನ ಬೆಂಬಲ

(ಗ್ರಾಮೀಣ ಜನತೆಯನ್ನು ಸೇವೆಗಳು ಮತ್ತು ಮಾರುಕಟ್ಟೆಗಳಿಗೆ ಸಂಪರ್ಕಿಸಲು ೪೦೦ ಮಿಲಿಯ ಅಮೇರಿಕನ್ ಡಾಲರ್‌ಗಳು)

**ವಾಷಿಂಗ್ಟನ್,** ಸೆಪ್ಟೆಂಬರ್ ೨೩, ೨೦೦೪ – ಭಾರತದ ಗ್ರಾಮೀಣ ರಸ್ತೆಗಳ ಅಭಿವೃದ್ಧಿಗಾಗಿ ವಿಶ್ವಬ್ಯಾಂಕ್ ಇಂದು ೪೦೦ ಮಿಲಿಯ ಅಮೇರಿಕನ್ ಡಾಲರ್‌ನಷ್ಟು ಮೊತ್ತವನ್ನು ಸಹಾಯ ಧನವಾಗಿ ನೀಡಲಿರುವುದನ್ನು ಅನಮೋದಿಸಿತು. ಗ್ರಾಮೀಣ ಜನತೆಯನ್ನು ಸಾಮಾಜಿಕ ಸೇವೆಗಳು ಮತ್ತು ಮಾರುಕಟ್ಟೆಗೆ ಸೇರಿಸುವಲ್ಲಿ ಉತ್ತಮ ರಸ್ತೆಗಳನ್ನು ನಿರ್ಮಿಸುವುದು ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

ವಿಶ್ವಬ್ಯಾಂಕಿನ ಹಿರಿಯ ಸಾರಿಗೆ ತಜ್ಞ ಶ್ರೀ ಪಿಯರ್ಸ್ ವಿಕರ್ಸ್, "ಭಾರತದಲ್ಲಿ ಸುಮಾರು ೨೦೦ ಮಿಲಿಯ ಜನರಿಗೆ ಎಲ್ಲಾ ಋತುಗಳಲ್ಲಿ ಉಪಯೋಗಿಸಬಹುದಾದ ರಸ್ತೆಗಳು ಇಲ್ಲ" ಎನ್ನುತ್ತಾರೆ. "ಇದು ಭಾರತದ ಬಹುಸಂಖ್ಯಾತ ಬಡಜನರನ್ನು ಪ್ರತಿನಿಧಿಸುವ ಗ್ರಾಮೀಣ ಜನತೆಯನ್ನು ಆರ್ಥಿಕವಾಗಿ ಒಗ್ಗೂಡಿಸುವಲ್ಲಿ ಮತ್ತು ಮೂಲಭೂತ ಅವಶ್ಯಕತೆಗಳಾದ ಆರೋಗ್ಯ ರಕ್ಷಣೆ ಮತ್ತು ಶಿಕ್ಷಣದಂತಹ ಸೇವೆಗಳನ್ನು ಪಡೆಯುವಲ್ಲಿ ತಡೆಯುಂಟಾಗುತ್ತದೆ."

ಗ್ರಾಮೀಣ ಪ್ರದೇಶಗಳಲ್ಲಿ ಯೋಗ್ಯ ರಸ್ತೆಗಳ ವ್ಯವಸ್ಥೆಯ ಕೊರತೆಗೆ ಉತ್ತರವಾಗಿ ಭಾರತ ಸರಕಾರ ಗ್ರಾಮೀಣ ಪ್ರದೇಶಗಳನ್ನು ಜೋಡಿಸುವ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯನ್ನು ಪ್ರಾಯೋಜಿಸಿದೆ. ವಿಶ್ವಬ್ಯಾಂಕ್ ಅನುಮೋದಿಸಿದ ಗ್ರಾಮೀಣ ರಸ್ತೆ ಯೋಜನೆಯು ಇಂದು ರಾಷ್ಟ್ರೀಯ ಯೋಜನೆಯನ್ನು ಕಾರ್ಯರೂಪಕ್ಕೆ ತರುವುದಕ್ಕಾಗಿ ಬೆಂಬಲವನ್ನು ಕೊಡುವ ಭಾರತ ಸರಕಾರಕ್ಕೆ ಸಾಲ/ಹಣಸಂದಾಯ ಮಾಡುವ ಸರಣಿಗಳಲ್ಲಿ ಪ್ರಥಮವಾಗಿದೆ.

ಈ ನಿಧಿಯು ಈಗಾಗಲೇ ಅಸ್ತಿತ್ವದಲ್ಲಿರುವ ಹಿಮಾಚಲ ಪ್ರದೇಶ, ಜಾರ್ಖಂಡ, ರಾಜಸ್ತಾನ ಮತ್ತು ಉತ್ತರ ಪ್ರದೇಶಗಳಂತಹ ಬಹಳ ಕೆಳಮಟ್ಟದ ರಸ್ತೆ ಸಂಪರ್ಕ ಹೊಂದಿದ ರಾಜ್ಯಗಳ ಅರ್ಧಾಂಶ ಜಿಲ್ಲೆಗಳಲ್ಲಿ ರಸ್ತೆ ಸಂಪರ್ಕಜಾಲದ ನಿರ್ಮಾಣ, ನಿರ್ವಹಣೆಗಾಗಿ ವರ್ಗಾವಣೆ ಹೊಂದಿರುವ ನಿಧಿಗೆ ಜೋಡಣೆಯಾಗಿದೆ. ಇನ್ನು ಕೆಳಮಟ್ಟದಲ್ಲಿ ರಸ್ತೆ ಸಂಪರ್ಕ ಹೊಂದಿರುವ ಬಿಹಾರದಂತಹ ರಾಜ್ಯಗಳನ್ನು ಸದ್ಯದ ಯೋಜನೆಯ ವ್ಯಾಪ್ತಿಯೊಳಗೆ ಸೇರಿಸಿ ಹಿಗ್ಗಿಸಬಹುದೆಂಬುದು ವಿಕರ್ಸ್ ಅವರ ಅಭಿಪ್ರಾಯ.

ಗ್ರಾಮೀಣ ಪ್ರದೇಶಗಳಲ್ಲಿ ಜನರ ಕ್ಷೇತ್ರ ಪ್ರಯಾಣಕ್ಕೆ ಹಾಗೂ ಸರಕಿನ ಶೀಘ್ರ ಸಾಗಣಿಕೆ ಮತ್ತು ಕಡಿಮೆ ದರದಲ್ಲಿ ಪ್ರಯಾಣ ಮತ್ತು ಸರಕಿನ ಸಾಗಾಣಿಕೆಯು ಈ ಯೋಜನೆಯ ಉದ್ದೇಶವಾಗಿದೆ. ಈ ಯೋಜನೆಯ ಇತರ ಪ್ರಯೋಜನಗಳಲ್ಲಿ ಕಡಿಮೆ ಬೆಲೆಯಲ್ಲಿ ಸಾಮಗ್ರಿಗಳನ್ನು ಒದಗಿಸಿಕೊಡುವುದು ಮತ್ತು ಕೃಷಿಕಾರ್ಯಗಳ ಖರ್ಚುವೆಚ್ಚಗಳ ಕಡಿತ, ಉನ್ನತ ಮಟ್ಟದದಲ್ಲಿ ನಿಯಮಿತ ಮತ್ತು ಸಂಬಲರ್ಹವಾದ ಸಾರ್ವಜನಿಕ ಸಾರಿಗೆ, ಭೂಮೌಲ್ಯಧಾಋಣೆಯಲ್ಲಿ ಏರಿಕೆ ಒದಗಿಸುವುದು.

ಸೇವೆಯನ್ನೊದಗಿಸುವ(ಅಧ್ಯಾಪಕರು, ಆರೋಗ್ಯ ಇಲಾಖೆಯ ಸಿಬ್ಬಂದಿಗಳು, ಎಕ್ಸ್ಟೆನ್ಷನ್ ಸ್ಟಾಫ್ ಮತ್ತು ವಾಣಿಜ್ಯ ಮಾರಾಟಗಾರರು) ವವರಿಗೆ ಪ್ರೋತ್ಸಾಹಕ ಭಡ್ತಿಯನ್ನು ನೀಡುವುದು, ಯೋಜನಾ ಸ್ಥಳಗಳನ್ನು ಪತ್ತೆಹಚ್ಚುವುದು ಇತ್ಯಾದಿಗಳು ಸೇರಿವೆ. ಇದರ ಜೊತೆಗೆ ಶಿಕ್ಷಣ ಹಾಗೂ ಆರೋಗ್ಯ ಸೌಲಭ್ಯಗಳ ಮಟ್ಟವನ್ನು ಅಭಿವೃದ್ಧಿ ಪಡಿಸುವಲ್ಲಿ ಮತ್ತು ಇತರ ಮೂಲಭೂತ ಸೌಕರ್ಯಗಳ ರಚನೆಯಲ್ಲಿ ಹೆಚ್ಚಿನ ಮೊತ್ತವನ್ನು ತೊಡಗಿಸುವಲ್ಲಿ ರೈತರಿಗೆ ಉನ್ನತ ಮಟ್ಟದ ಫಸಲನ್ನು ಪಡೆಯುವಲ್ಲಿ ಮತ್ತು ಪರ್ಯಾಯ ಬೆಳೆಗಳನ್ನು ಬೆಳೆಸುವಲ್ಲಿ ಈ ಯೋಜನೆಯು ಅವಕಾಶಗಳನ್ನು ಪ್ರೋತ್ಸಾಹವನ್ನು ಕೊಡುತ್ತದೆ.

ಇದರಿಂದಾಗಿ ಹೊಸ ರಸ್ತೆಗಳ ನಿರ್ಮಾಣ ಮತ್ತು ಹಳೆ ರಸ್ತೆಗಳ ನಿರ್ವಹಣೆಯಲ್ಲಿ ಉದ್ಯೋಗವಕಾಶಗಳು ಉಂಟಾಗುವ ಅವಕಾಶವಿದೆ.

ಈ ಯೋಜನೆಯು ಭಾರತ ದೇಶದಲ್ಲಿ ಬಡತನವನ್ನು ಕಡಿಮೆಮಾಡುವುದಕ್ಕೆ ಗ್ರಾಮೀಣ ಅಭಿವೃದ್ಧಿಯ ಮುಖ್ಯ ಎಂಜಿನ್ ಆಗಿ ವೇಗವರ್ಧಕದಂತೆ ಪ್ರಯತ್ನಿಸುತ್ತಿರುವ ಭಾರತದ ರಾಷ್ಟ್ರೀಯ ನೀತಿಗೆ ಅನುಗುಣವಾಗಿದೆ.

ಈಗ ಪ್ರಸ್ತಾಪಿಸಿದ ಯೋಜನೆಯು, ಭಾರತದಲ್ಲಿ ಬಡತನವನ್ನು ನಿವಾರಿಸುವ ಉದ್ದೇಶಕ್ಕೆ ಉತ್ತಮ ಕೊಡುಗೆ ಕೊಡುವುದನ್ನು ನಿರೀಕ್ಷಿಸಿದೆ ಎಂದು ವಿಕರ್ಸ್ ಹೇಳುತ್ತಾರೆ.  ಮೊದಲಿಗೆ ಪ್ರಸ್ತಾಪಿಸಿದ ಗ್ರಾಮೀಣ ಅಭಿವೃದ್ಧಿಯ ಆರ್ಥಿಕ ಚಟುವಟಿಕೆಯ ಅಭಿವೃದ್ಧಿಗೆ ತನ್ನ ಕೊಡುಗೆಯನ್ನು ನೀಡುವುದು. ಈ ಮೂಲಕ ಹೆಚ್ಚಿನ ಉದ್ಯೋಗ, ವ್ಯಾಪಾರ, ವಿಶೇಷ ಪರಿಣತಿ ಮತ್ತು ಗ್ರಾಮದೊಳಗಿನ ಆರ್ಥಿಕ ಅಭಿವೃದ್ಧಿಗೆ ಅವಕಾಶಗಳನ್ನು ಒದಗಿಸಿಕೊಡುವುದು. ಎರಡನೆಯದಾಗಿ ಅಭಿವೃದ್ಧಿ ಹೊಂದಿದ ಗ್ರಾಮೀಣ ರಸ್ತೆಗಳು, ಮೂಲಭೂತ ಸೇವೆಗಳು ಮುಖ್ಯವಾಗಿ ಆರೋಗ್ಯ ರಕ್ಷಣೆ ಮತ್ತು ಶಿಕ್ಷಣಕ್ಕೆ ಉತ್ತಮದಾರಿಗಳನ್ನು ಒದಗಿಸುವುದು ಹಾಗೂ ಆ ಮೂಲಕ ಈ ಯೋಜನೆಯು ಪ್ರಭಾವ ಬೀರುವ ಎಲ್ಲ ಕ್ಷೇತ್ರಗಳ ಬಡ ಜನರ ಜೀವನಮಟ್ಟದಲ್ಲಿ ಅಭಿವೃದ್ಧಿಗೆ ಉತ್ತಮ ದಾರಿಗಳನ್ನು ಒದಗಿಸುವುದು.

ಮೈಕೆಲ್ ಕಾರ್ಟರ್ : ವಿಶ್ವಬ್ಯಾಂಕಿನ ಭಾರತದ ರಾಷ್ಟ್ರೀಯ ನಿರ್ದೇಶಕರಾದ ಇವರು,– ಈ ಯೋಜನೆಯು ರಾಷ್ಟ್ರೀಯ ತಂತ್ರಗಳ ನಿಯಮಗಳನ್ನಾಧರಿಸಿದ ಸಿಲೆಕ್ಟಿವಿಟಿ, ಪಾರ್ಟ್ನರ್‌ಶಿಪ್ ಮತ್ತು ಪ್ರೋಗ್ರಾಮೇಟಿಕ್ ಅಪ್ರೋಚ್ ಎಂಬ ಮೂರು ತಂತ್ರಗಳನ್ನಾಧರಿಸಿದೆ ಎಂದು ತಿಳಿಸಿದರು. ಈ ಯೋಜನೆಯ ಪ್ರಸ್ತಾವನೆಯು ಗ್ರಾಮೀನ ಪ್ರದೇಶಗಳನ್ನು ಸೇರಿಸುವ ಹಾಗೂ ಮುಂದೆ ಸಾಧ್ಯವಿರುವ ಕ್ಷೇತ್ರಗಳಲ್ಲಿ ಕಾರ್ಯನಡೆಸುವ ಮುಂದಿನ ಏಳು ವರ್ಷಗಳಲ್ಲಿ ಸರಕಾರದ ಯೋಜನೆಗಳನ್ನು ಬೆಂಬಲಿಸುವ ಸಾಲ/ಹಣಸಂದಾಯ ಮಾಡುವ ಸಂಸ್ಥೆಗಳ ಸರಣಿಯಲ್ಲಿ ಮೊತ್ತಮೊದಲಾಗಿದೆ.

ಇದರ ಮೊದಲ ಭಾಗದ ಕಾರ್ಯಾಚರಣೆಯಲ್ಲಿ ರಸ್ತೆಗಳ ಪುನಃರ್ನಿಮಾಣ ಮತ್ತು ಅಭಿವೃದ್ಧಿಗಾಗಿ ಮೂರು ಮಿಲಿಯ ಅಮೆರಿಕನ್ ಡಾಲರ್‌ಗಳ ಸಾಲವನ್ನು (ಬಿಆರ್‌ಡಿ) ನಂತರ ಮುನ್ನೂರು ಮಿಲಿಯನ್ ಅಮೆರಿಕನ್ ಡಾಲರ್‌ಗಳ ಹಣಸಂದಾಯವನ್ನು ಅಂತರರಾಷ್ಟ್ರೀಯ ಅಭಿವೃದ್ಧಿ ಸಂಘದಿಂದ ಬ್ಯಾಂಕಿನ ರಿಯಾಯಿತಿದರದ ಸಹಾಯ ಹಸ್ತದಿಂದ ಕೊಡಿಸುವುದು ಸೇರಿದೆ. ಐಬಿಆರ್‌ಡಿ ಸಾಲವು ವೈವಿಧ್ಯಮಯ ಕಂತುಗಳಲ್ಲಿ, ಜೊತೆಯಲ್ಲಿ ಐದು ವರ್ಷಗಳ ಗ್ರೇಸ್ ಸಮಯದೊಂದಿಗೆ ಇಪ್ಪತ್ತು ವರ್ಷಗಳಲ್ಲಿ ಪಾವತಿಸಬಹುದಾಗಿದೆ. ಐಡಿಎ ಸಾಲಕ್ಕೆ ಮೂವತ್ತೈದು ವರ್ಷಗಳ ಮೆಚುರಿಟಿ ಮತ್ತು ಹತ್ತು ವರ್ಷಗಳ ಗ್ರೇಸ್ ಅವಧಿಯು ಇದೆ.

ವಿಶ್ವಬ್ಯಾಂಕಿನ ಕಾರ್ಯಕ್ರಮಗಳ ಕುರಿತಾದ ಹೆಚ್ಚಿನ ಮಾಹಿತಿಗಾಗಿ ಭೇಟಿ ನೀಡಿ :
http://www.worldbank.org.in/

ಈ ಯೋಜನೆಯ ಕುರಿತಾದ ಹೆಚ್ಚಿನ ಮಾಹಿತಿಗಾಗಿ ಭೇಟಿ ನೀಡಿ:
http://www.worldbank.org.lv/external/default/main?pagePK=64027221&piPK=64027220&theSitePK=295584&menuPK=295617&Projectid=P077977